ಶ್ರೀ ಹೆಚ್. ಎಂ. ಚನ್ನಬಸಪ್ಪ.—ಒಂದು ವರ್ಷಕ್ಕೆ 50 ಕಿಲೋಮೀಟರ್ ಕೆಲಸ ತೆಗೆದು ಕೊಳ್ಳುತ್ತೇವೆ ಎಂದು ನಾನು ಎಲ್ಲಿಯೂ ಹೇಳಿಲ್ಲ.

ಶ್ರೀ ಚಾಡರಡ್ಡಿ.—ಸ್ವಾಮಿ, ತಾವು 10 ಕಿಲೋಮೀಟರ್ ದೂರದ ರಸ್ತೆಯನ್ನು ತೆಗೆದು ಕೊಂಡಮೇಲೆ ಅದರ ಕೆಲಸವನ್ನು ಪೂರ್ತಿ ಮಾಡಬೇಕು, ಅದರಲ್ಲಿ ಅರ್ಧ ಕೆಲಸಮಾಡಿ ಉಳಿದ ಅರ್ಧ ಕೆಲಸವನ್ನು ಹಾಗೆಯೇ ಬಿಟ್ಟರೆ ಎರಡು ವರ್ಷ ಕಳೆದನಂತರ ಮತ್ತೆ ಪುನಃ ಆದೇ ರಸ್ತೆಯನ್ನು ರಿಪೇರಿ ಮಾಡಿಸಬೇಕಾದರೆ ಮತ್ತೆ ಪೂರ್ತ ಖರ್ಚು ಬೀಳುತ್ತದೆ, ಆದ್ದರಿಂದ ತಾವು ತೆಗೆದುಕೊಂಡ ರಸ್ತೆ ಕೆಲಸವನ್ನು ಪೂರ್ತಿಯಾಗಿ ಮಾಡಿಸಬೇಕು ಎಂದು ಹೇಳುತ್ತೇನೆ.

ಶ್ರೀ ಹೆಚ್. ಎಂ. ಚನ್ನಬಸಪ್ಪ.—ಈಗ 50 ಕಿಲೋಮೀಟರ್ ರಸ್ತೆ ಕೆಲಸವನ್ನು ಏಕ ಕಾಲದಲ್ಲಿ ಪೂರೈಸುವುದಕ್ಕಾಗುವುದಿಲ್ಲ ಎಂಬುದು ತಮಗೆ ಗೊತ್ತಿದೆ. ಮತ್ತೆ ಆರ್ಡರ್‌ನಲ್ಲಿ It is on a phased programme we take up these things ಎಂದು ಮಾಡಿದ್ದಾರೆ. ಫೇಸಡ್ ಪ್ರೋಗ್ರಾಂನಲ್ಲಿ ಒಂದು ವರ್ಷಕ್ಕೆ ಎಷ್ಟು ಹಣ ಕೊಟ್ಟಿರುತ್ತಾರೋ ಆದರಲ್ಲಿ ರೂರಲ್ ಕಮ್ಯುನಿಕೇಷನ್ ಕೆಲಸ ಮಾಡಿಸುತ್ತಾರೆ, ನಂತರ ಮುಂದಿನ ವರ್ಷದ ಹಣದಲ್ಲಿ ಮುಂದಿನ ಕೆಲಸ ಮಾಡಿಸುತ್ತಾರೆ.

ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ನಿರ್ಮಿಸುವುದು

88. **ಶ್ರೀ ಕೆ. ಎಚ್. ಹನುಮೇಗೌಡ** (ಹಾಸನ).—ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ಹಾಸನ ತಾಲ್ಲೂಕಿನ ಯಾವ ಯಾವ ಹಳ್ಳಿಯ ಕುಡಿಯುವ ನೀರಿನ ಬಾವಿಗಳ ಕೆಲಸಗಳನ್ನು ಕಳೆದ 50 ವರ್ಷಗಳಿಗೆ ಮುಂಚೆಯೇ ಪ್ರಾರಂಭಿಸಿ ಕೆಲಸ ಪೂರ್ತಿಯಾಗದೆ ನಿಂತಿವೆ

(ಆ) ಪ್ರತಿಯೊಂದು ಕೆಲಸದ ಅಂದಾಜು ಮೊಬಲಗು ಮತ್ತು ಇವುಗಳ ಬಾಬ್ತು ಇದುವರೆಗೆ ಖರ್ಚಾಗಿರುವ ಮೊಬಲಗೆಷ್ಟು.

(ಇ) ನಿಗದಿಯಾದ ಅವಧಿಯೊಳಗೆ ಕೆಲಸಗಳು ಪೂರ್ಣವಾಗದಿರಲು ಕಾರಣಗಳೇನು.

(ಈ) ಈ ಕೆಲಸಗಳಿಗೆ ಗ್ರಾಮಸ್ಥರ ವಂತಿಗೆ ಮತ್ತು ಪಂಚಾಯತಿಯ ವಂತಿಗೆಯನ್ನು ಕೊಟ್ಟಿದ್ದರೂ ನಿಗದಿಯಾದ ಕಾಲದಲ್ಲಿ ಈ ಕೆಲಸಗಳು ಪೂರ್ಣವಾಗದಿರುವುದಕ್ಕೆ ಕಾರಣಗಳೇನು.

(ಉ) ಈ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ.

(ಊ) ಈ ಕೆಲಸಗಳು ಪೂರ್ಣಗೊಂಡು ಸಂಬಂಧಪಟ್ಟ ಹಳ್ಳಿಯ ಜನರಿಗೆ ಕುಡಿಯುವ ನೀರನ್ನೊದಗಿಸುವಂತೆ ಮಾಡಲು ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ.

(ಋ) ಈ ಕೆಲಸಗಳನ್ನು ಪೂರ್ತಿ ಮಾಡಲು ಎಸ್ಟಿಮೇಟಿನ ಹಣಕ್ಕಿಂತ ಈಗ ಎಷ್ಟು ಹಣ ಬೇಕಾಗುತ್ತೆ ?

ಶ್ರೀ ಎನ್. ರಾಚಯ್ಯ (ಗ್ರಾಮಾಭಿವೃದ್ಧಿ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು).—

ಉತ್ತರ—(ಅ) (1) ಅರಳಿಕಟ್ಟೆ (2) ಮುತ್ತತ್ತಿ (3) ಗಾಡೇನಹಳ್ಳಿ ಕೊಪ್ಪಲು (4) ಹರಿಹರಪುರ (5) ಹೊಸೂರು (6) ಸುಂಡೇನಹಳ್ಳಿ (ಸಾರ್ವಜನಿಕ) (7) ಸುಂಡೇನಹಳ್ಳಿ (ಹರಿಜನ ಕಾಲೋನಿ) (8) ಕಟ್ಟೆಹೊಸಹಳ್ಳಿ (9) ಗಾಡಗೆರೆ (10) ಮಡೇನೂರು (11) ಜಾಗರವಳ್ಳಿ.

(ಆ) —

ಗ್ರಾಮದ ಹೆಸರು		ಅಂದಾಜು	ಇದುವರೆಗೆ ಖರ್ಚಾಗಿರುವ ಹಣ
1	2	3	4
		ರೂ. ಗಳು	ರೂ:ಗಳು
(1)	ಅರಳಿಕಟ್ಟೆ	10,000	4,977
(2)	ಮುತ್ತತ್ತಿ	7,000	5,369
(3)	ಗಾಡೇನಹಳ್ಳಿ ಕೊಪ್ಪಲು	5,400	3,150
(4)	ಹರಿಹರಪುರ	4,300	1,242
(5)	ಹೊಸೂರು	4,800	1,376
(6)	ನುಂಡೇನಹಳ್ಳಿ (ಸಾರ್ವಜನಿಕ)	4,800	3,630
(7)	ನುಂಡೇನಹಳ್ಳಿ (ಹರಿಜನ ಕಾಲೋನಿ)	4,800	4,358
(8)	ಕಟ್ಟೆಹೊಸಹಳ್ಳಿ	8,700	2,678
(9)	ಗಾಡಗೆರೆ	4,800	405
(10)	ಮಡೇನೂರು	13,200	5,012
(11)	ಜಾಗರವಳ್ಳಿ	7,100	2,105

(ಇ) ಮೇಲ್ಕಂಡ ಕೆಲಸಗಳ ಪೈಕಿ ನುಂಡೇನಹಳ್ಳಿ ಗ್ರಾಮದಲ್ಲಿ ತೆಗೆದುಕೊಂಡಿರುವ ಎರಡು ಬಾವಿಗಳ ಕೆಲಸಗಳ ಕಡತಗಳನ್ನು ಬಿಟ್ಟು ಇನ್ನುಳಿದ ಒಂಬತ್ತು ಬಾವಿಗಳ ಕಾಮಗಾರಿಯ ಕಡತಗಳು 26-2-1972ರವರೆವಿಗೆ ಜಾಗೃತ ಆಯೋಗದ ಕಛೇರಿಯಲ್ಲಿ ತನಿಖೆಗೆ ಇದರಿಂದಲೂ ಮತ್ತು ಕೆಲವು ಅಂದಾಜುಗಳನ್ನು ಪರಿಷ್ಕರಿಸಬೇಕಾಯಿತು. ನುಂಡೇನಹಳ್ಳಿಯ ಎರಡು ಬಾವಿಗಳ ಕೆಲಸಗಳ ಕಡತಗಳು ಇನ್ನೂ ಜಾಗೃತ ಆಯೋಗದ ಕಛೇರಿಯಲ್ಲಿಯೇ ಉಳಿದಿದೆ. ಜಿಲ್ಲಾಧಿಕಾರಿಗಳ ವರದಿಯಂತೆ ಗಾಡೇನಹಳ್ಳಿ ಕೊಪ್ಪಲು, ಹರಿಹರಪುರ, ಹೊಸೂರು, ಗಾಡಗೆರೆ, ಮತ್ತು ಜಾಗರವಳ್ಳಿ ಗ್ರಾಮಗಳಲ್ಲಿ ತೆಗೆದುಕೊಂಡಿರುವ ಬಾವಿಗಳಲ್ಲಿ ನೀರು ಬೀಳದ ಕಾರಣದಿಂದ ಅವುಗಳನ್ನು ತ್ಯಜಿಸಲು ನಡವಳಿಕೆ ತೆಗೆದುಕೊಳ್ಳಲಾಗಿದೆ. ಅರಳಿಕಟ್ಟೆ, ಮುತ್ತತ್ತಿ, ಕಟ್ಟೆಹೊಸಹಳ್ಳಿ ಮತ್ತು ಮಡೇನೂರು ಗ್ರಾಮಗಳಲ್ಲಿ ತೆಗೆದುಕೊಂಡಿರುವ ಬಾವಿಗಳ ಅಂದಾಜುಗಳನ್ನು ಪರಿಷ್ಕರಿಸಿ ಮಂಜೂರಾತಿಗೆ ಇಡಲಾಗಿದೆ. ಮೇಲ್ಕಂಡ ಕಾರಣಗಳಿಂದ ಈ ಬಾವಿಗಳ ಕೆಲಸಗಳನ್ನು ಇದುವರೆಗೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ.

(ಈ) ಗ್ರಾಮಸ್ಥರ ಭಾಗದ ವಂತಿಗೆ ಮತ್ತು ಪಂಚಾಯಿತಿಯ ವಂತಿಗೆ ಬಂದಿರುವುದಿಲ್ಲ. ಈ ಬಗ್ಗೆ ವ್ಯವಹರಿಸಲಾಗಿದೆ.

(ಉ) ಯಾವ ಯಾವ ಬಾವಿಗಳಲ್ಲಿ ನೀರು ಬೀಳುವ ಸಾಧ್ಯತೆ ಇದೆಯೋ ಅಂಥ ಬಾವಿಗಳನ್ನು ಆದಷ್ಟು ಬೇಗನೇ ಪೂರ್ಣಗೊಳಿಸಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿದೆ. ನೀರು ಬೀಳದ ಬಾವಿಗಳ ಕೆಲಸಗಳನ್ನು ತ್ಯಜಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲೂ ಸಹ ಜಿಲ್ಲಾಧಿಕಾರಿಗಳಿಗೆ ತಿಳಿಸಲಾಗಿದೆ.

(ಊ) ಹರಿಹರ ಪುರ, ನುಂಡೇನಹಳ್ಳಿ, ಕಟ್ಟೆಹೊಸಹಳ್ಳಿ, ಗಾಡಗೆರೆ ಮತ್ತು ಜಾಗರವಳ್ಳಿ ಗ್ರಾಮಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಯಿಸಲಾಗಿದೆ. ಗಾಡೇನಹಳ್ಳಿಯಲ್ಲಿ ಕೊಳವೆ ಬಾವಿ ತೆಗೆಯಿಸಲಾಗಿ ಈ ಬಾವಿಯಲ್ಲಿ ನೀರು ಬಿದ್ದಿಲ್ಲ ಕಾರಣ ಊರಲ್ಲಿರುವ ಕಲ್ಯಾಣಿಯ ನೀರನ್ನು ಗ್ರಾಮಸ್ಥರು ಉಪಯೋಗಿಸುತ್ತಿದ್ದಾರೆ. ಅರಳಿಕಟ್ಟೆ, ಮುತ್ತತ್ತಿ, ಕಟ್ಟೆಹೊಸಹಳ್ಳಿ ಮತ್ತು ಮಡೇನೂರು ಗ್ರಾಮಗಳಲ್ಲಿ ಕೈಗೊಂಡಿರುವ ಬಾವಿಗಳ ಕಾಮಗಾರಿಯನ್ನು ಪರಿಷ್ಕೃತ ಅಂದಾಜುಗಳು ಮಂಜೂರಾದ ನಂತರ ಆದಷ್ಟು ಬೇಗನೆ ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು. ನುಂಡೇನಹಳ್ಳಿ ಬಾವಿಗಳ ಕಾಮಗಾರಿಯ ಕಡತಗಳು ಜಾಗೃತ ಆಯೋಗದಿಂದ ಬಂದ ನಂತರ ಆ ಕೆಲಸಗಳನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಐ)	(1)	ಅರಳಿಕಟ್ಟೆ	...	5,027
	(2)	ಮುತ್ತತ್ತಿ	...	1,631
	(3)	ನುಂಡೇನಹಳ್ಳಿ (ಸಾರ್ವಜನಿಕ)	...	1,170
	(4)	ನುಂಡೇನಹಳ್ಳಿ (ಹರಿಜನ ಕಾಲೋನಿ)	...	500
	(5)	ಕಟ್ಟೆ ಹೊನಹಳ್ಳಿ	...	6,022
	(6)	ಮಡೇನೂರು	...	8,188
	(7)	ಹರಿಹರಪುರ		
	(8)	ಹೊನೂರು		ಈ ಕೆಲಸಗಳನ್ನು ಬಾವಿಗಳಲ್ಲಿ
	(9)	ಗಾಡಗೆರೆ		ನೀರು ಬೀಳದ ಕಾರಣ
	(10)	ಜಾಗರವಳ್ಳಿ		ತ್ಯಜಿಸಲಾಗುವುದು.
	(11)	ಗಾಡೇನಹಳ್ಳಿ ಕೊಪ್ಪಲು		

ಶ್ರೀ ಕೆ. ಪೆಚ್. ಹನುಮೇಗೌಡ.—ಸ್ವಾಮಿ, ತಾವು ಹೇಳಿರುವ ಹಾಗೆ 9 ಬಾವಿಗಳ ಕೆಲಸದ ಫೈಲುಗಳು ಜಾಗೃತ ಆಯೋಗದ ಕಛೇರಿಗೆ ಹೋಗಿರುತ್ತದೆ. ಆದುದರಿಂದ ಈ ಕೆಲಸ ಪೂರ್ಣವಾಗಿಲ್ಲ ಎಂದು ಹೇಳಿದ್ದೀರಿ, ಈ 9 ಬಾವಿಗಳಿಗೆ ಸಂಬಂಧಪಟ್ಟ ಕಾಗದ ಪತ್ರಗಳು ಜಾಗೃತ ಆಯೋಗದ ಕಛೇರಿಗೆ ಯಾವಾಗ ಹೋಯಿತು, ಏತಕ್ಕಾಗಿ ಹೋಯಿತು ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಎರಡು ಬಾವಿಗಳ ವಿನಹ ಮಿಕ್ಕ ಎಲಾ ಫೈಲುಗಳು ವಾಪಸ್ಸು ಬಂದಿರುತ್ತವೆ. ಆ ಫೈಲುಗಳು ಬಂದ ಮೇಲೆ ಆಯಾ ಗ್ರಾಮಗಳಲ್ಲಿ ಬಾವಿಗಳನ್ನು ತೆಗೆಯಬೇಕು ಎಂದು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದೆ.

ಶ್ರೀ ಕೆ. ಹೆಚ್, ಹನುಮೇಗೌಡ.—ಸ್ವಾಮಿ, ಜಾಗೃತಾ ಆಯೋಗದ ಕಛೇರಿಗೆ ಈ ಫೈಲುಗಳು ಹೋಗಲು ಕಾರಣವೇನು ? ಏತಕ್ಕೆ ಹೋಯಿತು ? ಅವರು ಏನು ಒಂದು ಒಪಿನಿಯನ್ ಕೊಟ್ಟಿದ್ದಾರೆ ಅದನ್ನು ತಿಳಿಸುತ್ತೀರಾ ?

ಶ್ರೀ ಎನ್. ರಾಚಯ್ಯ.—ಜಾಗೃತ ಆಯೋಗದ ಕಛೇರಿಯವರು ನೀವು ಬಾವಿಗಳನ್ನು ಗೆಯ್ರಿ, ಇಲ್ಲವೇ ಬಿಟ್ಟುಬಿಡಿ ಅವನ್ನು ಅವರು ಹೇಳುವುದಿಲ್ಲ, ಅಧಿಕಾರಿಗಳ ಮೇಲೆ ಆಕ್ಷೇಪಣೆ ಬರುತ್ತದೆ. ಅಧಿಕಾರಿಗಳ ಮೇಲೆ ಆಕ್ಷೇಪಣೆ ಬಂದಾಗ ಅವರ ವಿಚಾರದಲ್ಲಿ ಏನಾದರೂ ಅಕ್ರಮ ನಡೆಸಿದ್ದಾರೆಯೇ ಇಲ್ಲವೇ ಎಂದು ನೋಡಲಿಕ್ಕೆ ತೆಗೆದುಕೊಂಡು ಹೋಗುತ್ತಾರೆ; ಅನಂತರ ಅವರು ವಾಪಸ್ಸು ಫೈಲು ಕಳಿಸುತ್ತಾರೆ, ಅದರಂತೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ 9 ಬಾವಿಗಳ ವಿಚಾರದಲ್ಲಿ ಫೈಲುಗಳು ವಾಪಸ್ಸು ಬಂದಿದೆ ಅದರಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ, ಇನ್ನು ಎರಡು ಬಾವಿಗಳ ವಿಚಾರದಲ್ಲಿ ಫೈಲುಗಳು ಬಂದನಂತರ ಅವುಗಳಿಗೂ ಕೂಡ ಆದೇಶ ಕೊಡುತ್ತೇವೆ. ಒಟ್ಟಿನಲ್ಲಿ ಗ್ರಾಮಸ್ಥರು ಆಗತ್ಯ ಏನು ಇದೆ ಅದನ್ನು ತಿಳಿದು ಮಾಡುತ್ತೇವೆ, ನಾವು ನೀರನ್ನು ಒದಗಿಸುವ ಬಗ್ಗೆ ಜಾಗೃತ ಆಯೋಗದವರ ಒಪ್ಪಿಗೆ ಪಡೆಯಬೇಕಾಗಿಲ್ಲ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಸ್ವಾಮಿ, ತಾವು ಕಳೆದ ವರ್ಷ ಅನೇಕ ಗ್ರಾಮಗಳಿಗೆ ಕೊಳವೆ ಬಾವಿಗಳನ್ನು ಹಾಕಿಸಿದ್ದಿರಿ, ಆದರೆ ಆ ಕೊಳವೆ ಬಾವಿಗಳು ಒಂದು ಕೂಡ ಸರಿಯಾಗಿ ಕೆಲಸ ಮಾಡುತ್ತಿಲ್ಲ ಅದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ರಾಚಯ್ಯ.—ಈ ಪ್ರಶ್ನೆಗೆ ಅದು ಸಂಬಂಧಪಡುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಬಾವಿಗಳ ಫೈಲುಗಳು ಸುಮಾರು 10-12 ವರ್ಷಗಳಿಂದ ಹಿಂದೆ ಜಾಗೃತ ಆಯೋಗದ ಕಛೇರಿಗೆ ಹೋಗಿದೆ, ಆದರೆ ಅವರು ಸುಮಾರು ಆ ಸ್ಥಳಗಳಿಗೆ 8-10 ಸಾರಿ ಭೇಟಿ ಕೊಟ್ಟಿರುತ್ತಾರೆ ನಂತರ 10 ವರ್ಷಗಳಿಂದ ಫೈಲುಗಳನ್ನು ಇಟ್ಟುಕೊಂಡು ಈಗ ವಾಪಸ್ಸು ಕಳುಹಿಸಿರುತ್ತಾರೆ ಅವರು ಇಷ್ಟು ದಿವಸ ಇಟ್ಟುಕೊಂಡು ಈಗ ವಾಪಸ್ಸು ಕಳುಹಿಸಿರುವುದರಿಂದ, ಅವರು ಕೊಟ್ಟಿರುವ ವರದಿ ಮೇರೆ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ರಾಚಯ್ಯ.—ಯಾರಾದರೂ ಬೇಜವಾಬ್ದಾರಿ ಕೆಲಸ ಮಾಡಿದ್ದರೆ, ಸರ್ಕಾರದ ಆದೇಶ ಪರಿಪಾಲನೆ ಮಾಡದೇ ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಅನೇಕ ತರಹ ನಿಯಮಗಳು ಸರ್ಕಾರದಲ್ಲಿ ಇವೆ. ಅದರಂತೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಸ್ವಾಮಿ, ಗ್ರಾಮಾಂತರ ಪ್ರದೇಶಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ, ಅದರಂತೆ ಈಗ 28 ಸಾವಿರ ಗ್ರಾಮಗಳಿವೆ, ಇವುಗಳಲ್ಲಿ ಎಷ್ಟು ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸಿಲ್ಲ ಎನ್ನುವ ಬಗ್ಗೆ ತಮ್ಮಲ್ಲಿ ಏನಾದರೂ ಅಂಕಿಅಂಶಗಳು ಇವೆಯೇ ?

ಶ್ರೀ ಎನ್. ರಾಚಯ್ಯ.—ಈ ಪ್ರಶ್ನೆಗೆ ಅದು ಸಂಬಧಪಡುವುದಿಲ್ಲ.

ಶ್ರೀ ಎಂ.ಪಿ. ರಾಮಸ್ವಾಮಿ.—ಸ್ವಾಮಿ, ಈ ಬಾವಿಗಳನ್ನು ತೆಗೆಸುವಾಗ ಜಿಯಾಲಜಿಕಲ್ ಸರ್ವೆ ಮಾಡಿಸಿ ಕೆಲಸ ಪ್ರಾರಂಭ ಮಾಡಿಸುತ್ತೀರಾ ಅಥವಾ ಬೇಕಾಬಿಟ್ಟಿ ಸರ್ಕಾರದ ದುಡ್ಡು ಹೋಗಲಿ ಎಂದು ಮಾಡುತ್ತೀರಾ ?

ಶ್ರೀ ಎನ್. ರಾಚಯ್ಯ.—ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಜಿಯಾಲಜಿಕಲ್ ಸರ್ವೆ ಮಾಡಿಸಿ ಕೆಲಸ ಪ್ರಾರಂಭ ಮಾಡುವುದು, ಕೆಲವು ಸಂದರ್ಭದಲ್ಲಿ ಜಿಯಾಲಜಿಕಲ್ ಸರ್ವೆ ಮಾಡಿಸಿದರೂ ಕೂಡ ನೀರು ಬರುವುದಿಲ್ಲ. ಗಾಣಡೇನಹಳ್ಳಿಯಲ್ಲಿ ಪಕ್ಕದ ಬಾವಿಯಿಂದ ನೀರನ್ನು ತೆಗೆದುಕೊಳ್ಳುತ್ತಿದ್ದಾರೆ ಅಲ್ಲಿಗೆ ಕೂಡಲೇ ಬೋರ್‌ವೆಲ್ ಹಾಕಲಿಕ್ಕೆ ಆದೇಶ ಕೊಟ್ಟಿದ್ದೇವೆ. ಈ ಕುಡಿಯುವ ನೀರಿನ ಬಗ್ಗೆ ಮಾನ್ಯ ಹನುಮೇಗೌಡರು ಏನು ಆತಂಕಪಡುತ್ತಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಈಗ ಅಲ್ಲಿಗೆ ಕುಡಿಯುವ ನೀರಿನ ಬಗ್ಗೆ ಬೋರ್‌ವೆಲ್ ತೆಗೆಯಲು ಆದೇಶ ಕೊಟ್ಟಿದ್ದೇವೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಜಾಗೃತ ಆಯೋಗದವರು ಈ ಬಾವಿಗಳಿಗೆ ಸಂಬಂಧ ಪಟ್ಟ ವಿಷಯಗಳಲ್ಲಿ ಅಧಿಕಾರಿಗಳಿಂದ ಹಣದ ದುರುಪಯೋಗವಾಗಿದೆ ಎಂದು ಏನಾದರೂ ವರದಿಯನ್ನು ಕೊಟ್ಟಿದ್ದಾರೆಯೆ ?

ಶ್ರೀ ಎನ್. ರಾಚಯ್ಯ.—ಜಾಗೃತ ಆಯೋಗದವರಿಗೆ ಬಾವಿಗಳ ವಿಚಾರದಲ್ಲಿ, ಮೆಷರ್‌ಮೆಂಟ್ ಬಗ್ಗೆ ಶಾಸನಕರಿಂದ ದೂರುಗಳು ಬಂದಿರುತ್ತವೆ, ಆದ್ದರಿಂದ ಅವರು ಫೈಲುಗಳನ್ನು ತೆಗೆದುಕೊಂಡು ಹೋಗಿರುತ್ತಾರೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಇದರಲ್ಲಿ ಅಧಿಕಾರಿಗಳಿಂದ ಹಣ ದುರುಪಯೋಗವಾಗಿದೆ ಎಂದು ವರದಿ ಬಂದಿದ್ದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎನ್. ರಾಚಯ್ಯ—ಇದರ ಬಗ್ಗೆ ತಾವು ಬೇರೆ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಸ್ವಾಮಿ, ಜಾಗೃತ ಆಯೋಗದವರು ಏನು 9 ಫೈಲುಗಳನ್ನು ಕಳುಹಿಸಿ, ಸರ್ಕಾರಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಸೂಚನೆ ಕಳುಹಿಸಿದ್ದರೂ ಕೂಡ ತಾವು ಕ್ರಮ ತೆಗೆದುಕೊಂಡಿಲ್ಲ ಎನ್ನುವ ಪ್ರಸಂಗವಾಗಿದೆ ಅದಕ್ಕೆ ತಾವು ಏನು ಹೇಳುತ್ತೀರಾ ?

ಶ್ರೀ ಎನ್. ರಾಚಯ್ಯ. —ತಾವು ಹೇಳುವುದು ಸರಿಯಲ್ಲ, ಇದು ಆಧಾರ ರಹಿತವಾದುದು

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಈಗ ಸುಮಾರು 12 ವರ್ಷದಿಂದ ಕೆಲವು ಕಡೆಗಳಲ್ಲಿ ಬಾವಿಗಳು ಆಗಿಲ್ಲ, ತಾವು ಎಷ್ಟು ದಿವಸದಲ್ಲಿ ; ಕುಡಿಯುವ ನೀರಿನ ಬಾವಿಗಳನ್ನು ತೆಗೆಸುತ್ತೀರಾ ಖಡಾಖಂಡಿತವಾಗಿ ತಿಳಿಸಬೇಕು ?

ಶ್ರೀ ಎನ್. ರಾಚಯ್ಯ.—ರಿಮೈಸ್ಡ್ ಎಸ್ಟಿಮೇಟ್ ಆದಾಗ ಹಣ ಕೊಟ್ಟಿಲ್ಲ, ಎನ್ನುವುದು ಗಮನಕ್ಕೆ ಬಂದಿದೆ, ಆದ್ದರಿಂದ ಈ ಕುಡಿಯುವ ನೀರಿನ ಬಾವಿಗಳ ವಿಚಾರದಲ್ಲಿ ವಿಶೇಷ ಗಮನ ಕೊಡುತ್ತೇನೆ ಎಂದು ಸರ್ಕಾರದಿಂದ ಭರವಸೆ ಕೊಡುತ್ತೇನೆ.